ಭಾನುವಾರ
06, ಏಪ್ರಿಲ್ 2025

# ಸಿಇಟಿ ಕುರಿತಾಗಿ ಮಾಹಿತಿ ಕಾರ್ಯಕ್ರಮ ಯಶಸ್ವಿ



**ಕೊಂಕಣವಾಹಿನಿ ನ್ಯೂಸ್,**
**ಹಳಿಯಾಳ :** ಸಾಮಾನ್ಯ ಪ್ರವೇಶಾತಿ ಪರೀಕ್ಷೆ (ಸಿಇಟಿ) ಸೀಟು ಆಯ್ಕೆ ಪ್ರಕ್ರಿಯೆ ಕುರಿತಾಗಿ ವೃತ್ತಿಪರ ಶಿಕ್ಷಣ ಕೋರ್ಸ್‌ಗಳ ಆಕಾಂಕ್ಷಿತ ವಿದ್ಯಾರ್ಥಿಗಳು ತಿಳುವಳಿಕೆ ಹೊಂದುವುದು ಅವಶ್ಯವೆಂದು ಕೆಎಲ್‌ಎಸ್ ವಿಡಿಐಟಿ ಹಳಿಯಾಳ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ವಿ. ಎ. ಕುಲಕರ್ಣಿ ಹೇಳಿದರು. ಬೆಳಗಾವಿಯ ಕೆಎಲ್‌ಎಸ್ ಗೋಗಟೆ ವಾಣಿಜ್ಯ ಹಾಗೂ ವಿಜ್ಞಾನ ಪದವಿಪೂರ್ವ ವಿದ್ಯಾಲಯದಲ್ಲಿ ಆಯೋಜಿಸಲಾಗಿದ್ದ ಸಿಇಟಿ ಉಚಿತ ತರಬೇತಿ ಶಿಬಿರದಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ, ಸಿಇಟಿ ಕುರಿತಾಗಿ ಮಾಹಿತಿ ನೀಡಿದರು.

ಸಿಇಟಿ ಸೀಟು ಹಂಚಿಕೆ, ಸೀಟು ಆಯ್ಕೆ ಪ್ರಕ್ರಿಯೆ ಇವುಗಳ ಕುರಿತಾಗಿ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಿದರು. ಸೀಟು ಆಯ್ಕೆ ಪ್ರಕ್ರಿಯೆ ಕುರಿತಾಗಿ ಸರಿಯಾದ ತಿಳುವಳಿಕೆ ಹೊಂದಿದಲ್ಲಿ ಅನುಗುಣವಾಗಿ ಉತ್ತಮ ಕೋರ್ಸ್ ಮತ್ತು ಕಾಲೇಜುಗಳನ್ನು ಆಯ್ಕೆ ಮಾಡಿಕೊಳ್ಳಬಹುದೆಂದು ಹೇಳಿದರು. ಸಿಇಟಿ ಸೀಟು ಆಯ್ಕೆ ಹಾಗೂ ಇನ್ನಿತರ ವಿಷಯಗಳ ಕುರಿತಾಗಿ ವಿದ್ಯಾರ್ಥಿಗಳಿಗೆ ಮಾಹಿತಿ ಅವಶ್ಯಕತೆ ಇದ್ದಲ್ಲಿ ಮಹಾವಿದ್ಯಾಲಯದ ಸಿಇಟಿ ಸಹಾಯ ಕೇಂದ್ರವನ್ನು ಸಂಪರ್ಕಿಸಬಹುದು ಎಂದು ಹೇಳಿದರು.

ಮಹಾವಿದ್ಯಾಲಯದಲ್ಲಿ ವಿದ್ಯಾರ್ಥಿಗಳಿಗೆ 6 ದಿವಸಗಳ ಉಚಿತ ಸಿಇಟಿ ತರಬೇತಿ ಶಿಬಿರ ಆಯೋಜಿಸಿ, ಸೀಟು ಆಯ್ಕೆ ಪ್ರಕ್ರಿಯೆ ಕುರಿತಾಗಿ ಮಾರ್ಗದರ್ಶನ ನೀಡಲು ಸಹಕಾರ ನೀಡಿದ ಆಡಳಿತ ಮಂಡಳಿಗೆ, ಪ್ರಾಚಾರ್ಯ ಮತ್ತು ಸಿಬ್ಬಂದಿಗಳಿಗೆ ಡಾ. ವಿ. ಎ. ಕುಲಕರ್ಣಿ ಧನ್ಯವಾದ ತಿಳಿಸಿದರು.

ಕೆಎಲ್‌ಎಸ್ ಗೋಗಟೆ ಪದವಿ ಪೂರ್ವ ವಿದ್ಯಾಲಯದ ಪ್ರಾಂಶುಪಾಲ ಡಾ. ಎ. ಎಸ್. ಕೆರೂರ್ ಮಾತನಾಡಿ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ಅಣಕು ಪರೀಕ್ಷೆಯಲ್ಲಿ ಹೆಚ್ಚಿನ ಅಂಕ ಪಡೆದ ವಿದ್ಯಾರ್ಥಿಗಳಿಗೆ ಬಹುಮಾನ ನೀಡಿ ಪುರಸ್ಕರಿಸಲಾಯಿತು.

ಪ್ರೊ. ರವೀಂದ್ರ ಎಂ., ಪ್ರೊ. ರಾಕೇಶ್ ಪಾಟೀಲ್ ಪ್ರೊ. ವಿಜಯ್ ಹೀರಾಪಾಚೆ ತರಬೇತಿ ಶಿಬಿರ ಸಂಯೋಜಿಸಿದ್ದರು.

# ಸರಿಯಾದ ತಿಳಿವಳಿಕೆಯಿಂದ ಉತ್ತಮ ಕೋರ್ಸ್‌ಗೆ ಸೇರಿ

**ಹಳಿಯಾಳ:** ಸಾಮಾನ್ಯ ಪ್ರವೇಶಾತಿ ಪರೀಕ್ಷೆ (ಸಿಇಟಿ ) ಸೀಟು ಆಯ್ಕೆ ಪ್ರಕ್ರಿಯೆ ಕುರಿತಾಗಿ ವೃತ್ತಿಪರ ಶಿಕ್ಷಣ ಕೋರ್ಸ್ ಗಳ ಆಕಾಂಕ್ಷಿತ ವಿದ್ಯಾರ್ಥಿಗಳು ತಿಳುವಳಿಕೆ ಹೊಂದುವುದು ಅವಶ್ಯವೆಂದು ಕೆಎಲ್‌ಎಸ್ ವಿಡಿಐಟಿ ಹಳಿಯಾಳ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ವಿ.ಎ. ಕುಲಕರ್ಣಿ ಹೇಳಿದರು.

ಬೆಳಗಾವಿಯ ಕೆಎಲ್‌ಎಸ್ ಗೋಗಟೆ ವಾಣಿಜ್ಯ ಹಾಗೂ ವಿಜ್ಞಾನ ಪದವಿಪೂರ್ವ ವಿದ್ಯಾಲಯದಲ್ಲಿ ಆಯೋಜಿಸಲಾಗಿದ್ದ ಸಿಇಟಿ ಉಚಿತ ತರಬೇತಿ ಶಿಬಿರದಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ, ಸಿಇಟಿ ಕುರಿತಾಗಿ ಮಾಹಿತಿ



ನೀಡಿದರು.

ಸಿಇಟಿ ಸೀಟು ಹಂಚಿಕೆ, ಸೀಟು ಆಯ್ಕೆ ಪ್ರಕ್ರಿಯೆ ಇವುಗಳ ಕುರಿತಾಗಿ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಿದರು. ಸೀಟು ಆಯ್ಕೆ ಪ್ರಕ್ರಿಯೆ ಕುರಿತಾಗಿ ಸರಿಯಾದ ತಿಳುವಳಿಕೆ ಹೊಂದಿದಲ್ಲಿ ಅನುಗುಣವಾಗಿ ಉತ್ತಮ ಕೋರ್ಸ್ ಮತ್ತು ಕಾಲೇಜುಗಳನ್ನು ಆಯ್ಕೆ ಮಾಡಿಕೊಳ್ಳಬಹುದೆಂದು ಹೇಳಿದರು. ಸಿಇಟಿ ಸೀಟು ಆಯ್ಕೆ ಹಾಗೂ ಇನ್ನಿತರ ವಿಷಯಗಳ ಕುರಿತಾಗಿ ವಿದ್ಯಾರ್ಥಿಗಳಿಗೆ ಮಾಹಿತಿ ಅವಶ್ಯಕತೆ ಇದ್ದಲ್ಲಿ ಮಹಾವಿದ್ಯಾಲಯದ ಸಿಇಟಿ ಸಹಾಯ ಕೇಂದ್ರವನ್ನು ಸಂಪರ್ಕಿಸಬಹುದು ಎಂದು ಹೇಳಿದರು. ಕೆಎಲ್‌ಎಸ್ ಗೋಗಟೆ ಪದವಿ ಪೂರ್ವ ವಿದ್ಯಾಲಯದ ಪ್ರಾಂಶುಪಾಲ ಡಾ. ಎ.ಎಸ್. ಕೆರೂರ್ ಮಾತನಾಡಿದರು. ಅಣಕು ಪರೀಕ್ಷೆಯಲ್ಲಿ ಹೆಚ್ಚಿನ ಅಂಕ ಪಡೆದ ವಿದ್ಯಾರ್ಥಿ ಗಳಿಗೆ ಬಹುಮಾನ ನೀಡಿ ಪುರಸ್ಕರಿಸಲಾಯಿತು. ಪ್ರೊ. ರವೀಂದ್ರ ಎಂ., ಪ್ರೊ. ರಾಕೇಶ್ ಪಾಟೀಲ್, ಪ್ರೊ. ವಿಜಯ್ ಹೀರಾಪಾಚೆ ತರಬೇತಿ ಶಿಬಿರ ಸಂಯೋಜಿಸಿದ್ದರು.

# ಸಿಇಟಿ ತರಬೇತಿ ಶಿಬಿರ ಸಮಾರೋಪ



**»ಜನಮಾಧ್ಯಮ, ಹಳಿಯಾಳ:** ಕೆಎಲ್‌ಎಸ್ ವಿಡಿಐಟಿ ಹಳಿಯಾಳದಲ್ಲಿ ವೃತ್ತಿಪರ ಕೋರ್ಸ್ ಆಕಾಂಕ್ಷಿತ ವಿದ್ಯಾರ್ಥಿಗಳಿಗೆ ಸಾಮಾನ್ಯ ಪ್ರವೇಶಾತಿ ಪರೀಕ್ಷೆ ( ಸಿಇಟಿ ) ಗೆ ತರಬೇತಿ ನೀಡುವ ಶಿಬಿರವು ಎಪ್ರಿಲ್ 6 ರಂದು ಸಮಾರೋಪಗೊಂಡಿತು. ಭೌತಶಾಸ್ತ್ರ, ರಸಾಯನಶಾಸ್ತ್ರ ಹಾಗೂ ಗಣಿತಶಾಸ್ತ್ರ ವಿಷಯಗಳ ಕುರಿತಾಗಿ ಬೆಳಗಾವಿಯ ಲಕ್ಷ್ಯ ಅಕಾಡೆಮಿಯ ಉತ್ತಮ್ ಸಾಮ್ರೆಕರ್, ಮಹೇಂದ್ರ ಪಾಟೀಲ್ ಹಾಗೂ ಮೌನೇಶ್ವರಿ ಡಿ. ಅವರು ಆರು ದಿನಗಳ ಕಾಲ ವಿವರವಾಗಿ ತರಬೇತಿ ನೀಡಿದರು.

ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ, ಮಹಾವಿದ್ಯಾಲಯವು ಉಚಿತವಾಗಿ ನೀಡಿರುವ ಈ ತರಬೇತಿಯ ಸಂಪೂರ್ಣ ಲಾಭ ಪಡೆದುಕೊಂಡು ಸಿ ಇ ಟಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಪಡೆದುಕೊಳ್ಳುವಂತೆ ಶುಭ ಹಾರೈಸಿದರು. ಸಿಇಟಿ ಕೋರ್ಸ್ ಆಯ್ಕೆ, ಚಾಯ್ ಎಂಟ್ರಿ ಅಥವಾ ಇನ್ನಾವುದೇ ಸಂದೇಹಗಳಿದ್ದಲ್ಲಿ ವಿದ್ಯಾರ್ಥಿಗಳು ಮಹಾವಿದ್ಯಾಲಯವನ್ನು ಮುಕ್ತವಾಗಿ ಸಂಪರ್ಕಿಸಬಹುದಾಗಿದೆ ಎಂದು ಹೇಳಿದರು.

ಎಪ್ರಿಲ್ 1ರಿಂದ 6ರವರೆಗೆ ಹಮ್ಮಿಕೊಂಡಿದ್ದ ಈ ತರಬೇತಿ ಶಿಬಿರದಲ್ಲಿ ಸಿಇಟಿ ಅಣಕು ಪರೀಕ್ಷೆಯನ್ನು ಆಯೋಜಿಸಲಾಗಿತ್ತು. ಗಣಿತಶಾಸ್ತ್ರ ಪರೀಕ್ಷೆಯಲ್ಲಿ ಉತ್ತಮ ಸಾಧನೆ ತೋರಿದ ಹರಿಹಂತ, ನಿತಿನ್ ಕುಮಾರ್, ಏಕನಾಥ್, ಭೌತಶಾಸ್ತ್ರದಲ್ಲಿ ಅಖಿಲೇಶ್, ದೇವರಾಜ್ ಮತ್ತು ಗೌತಮ್ ಪೈ ; ರಸಾಯನಶಾಸ್ತ್ರದಲ್ಲಿ ಜ್ಯೋತಿ, ಸೂಫಿಯಾ, ದಿವ್ಯಾ ಇವರುಗಳಿಗೆ ಬಹುಮಾನ ನೀಡಿ ಪುರಸ್ಕರಿಸಲಾಯಿತು.

ವಿದ್ಯಾರ್ಥಿಗಳು ತರಬೇತಿ ಆಯೋಜನೆ ಬಗ್ಗೆ ಮೆಚ್ಚುಗೆ ವ್ಯಕ್ತ ಪಡಿಸಿ, ಆಡಳಿತ ಮಂಡಳಿ ಮತ್ತು ಮಹಾವಿದ್ಯಾಲಯಕ್ಕೆ ಆಭರಿಯಾಗಿದ್ದೇವೆ ಎಂದರು. ಬೆಳಗಾವಿ ಕೆಎಲ್‌ಎಸ್ ಪದವಿ ಪೂರ್ವ ವಿದ್ಯಾಲಯ ಹಾಗೂ ಕೆಎಲ್‌ಎಸ್ ವಿಡಿಐಟಿ ಹಳಿಯಾಳದಲ್ಲಿ ಆಯೋಜಿಸಿದ್ದ ಈ ತರಬೇತಿ ಶಿಬಿರದಲ್ಲಿ ನೂರಕ್ಕೂ ಅಧಿಕ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ವಿಜ್ಞಾನ ವಿಭಾಗದ ಮುಖ್ಯಸ್ಥ ಡಾ. ಸಮೀರ್ ಗಲಗಲಿ, ಡಾ. ವಿನೋದ್ ನಾಯಕ್ ಕಾರ್ಯಕ್ರಮ ಆಯೋಜಿಸಿದ್ದರು. ಡಾ. ಸ್ನೇಹಾ ಕುಲಕರ್ಣಿ, ಡಾ. ಎಂ ಎಸ್ ಸನ್ ನಾಯ್ಕರ್ ಹಾಗೂ ರಾಜೇಶ್ ನಿರ್ವಾಣಿ ಸಂಯೋಜಿಸಿದ್ದರು.